2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ನೌಕರರ ಬೇಡಿಕೆಗಳ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ (ಅಂಕೋಲ) : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ನೌಕರರು ಇವತ್ತು ಬೆಂಗಳೂರಿನಲ್ಲಿ ಬಹಳ ದೊಡ್ಡ ಹೋರಾಟವನ್ನು ನಡೆಸುತ್ತಿದ್ದಾರೆ ಆ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳು. ನಾನು ಗ್ರಾಮೀಣಾಭಿವೃದ್ಧಿ ಸಚಿವರ ಗಮನಸೆಳೆಯುವುದಕ್ಕೆ ಬಯಸುತ್ತಾ, ಇವತ್ತು ನಮ್ಮ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯ ನಂತರದಲ್ಲಿ ವಿಕೇಂದ್ರೀಕರಣ ವ್ಯವಸ್ಥೆಗೆ ಬಹಳ ಮಹತ್ವ ಬಂದಿದೆ, ಅದರಲ್ಲೂ ಗ್ರಾಮಪಂಚಾಯಿತಿಗಳಿಗೆ ಬರುವ ದಿನಗಳಲ್ಲಿ ಬಹುಶಃ ಈಗಿರುವುದಕ್ಕಿಂತ ಇನ್ನೂ ಹೆಚ್ಚಿನ ಜವಾಬ್ದಾರಿಗಳು, ಅಭಿವೃದ್ಧಿಪರವಾದ ಚಟುವಟಿಕೆಗಳನ್ನು ತೆಗೆದುಕೊಳ್ಳುವ ಅವಕಾಶಗಳನ್ನು ಕಲ್ಪಿಸಿಕೊಡುವಂತಹ ಸಂದರ್ಭಗಳು ಇವೆ. ನಮ್ಮ ರಾಜ್ಯದಲ್ಲಿ ಸುಮಾರು 5660 ಗ್ರಾಮಪಂಚಾಯಿತಿಗಳು ಇವೆ. ಗ್ರಾಮಪಂಚಾಯಿತಿಯ ಸದಸ್ಯರು ಬಹಳ ದೊಡ್ಡ ಸಂಖ್ಯೆಯಲ್ಲಿ 85 ಸಾವಿರಕ್ಕಿಂತ ಹೆಚ್ಚು ರಾಜ್ಯದಲ್ಲಿದ್ದಾರೆ,

12.00 ಪಿಎಂ

ಆದರೆ ಇವತ್ತು ಮೂಲಭೂತವಾಗಿ ನಮ್ಮ ಗ್ರಾಮಸಭೆಗಳನ್ನಾಗಲೀ ಗ್ರಾಮಪಂಚಾಯ್ತಿ ವ್ಯವಸ್ಥೆಯನ್ನಾಗಲೀ ಸಮರ್ಪಕವಾಗಿ ನಡೆಸುವುದಕ್ಕೆ ಅನೇಕ ರೀತಿಯ ತೊಂದರೆಗಳಾಗುತ್ತಾ ಇದೆ. ನಾನುಆ ಎಲ್ಲಾ ವಿಷಯಗಳಿಗೆ ಹೋಗುವುದಕ್ಕಿಂತ ಮೊದಲು ಇವತ್ತು ಈ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ನೌಕರರು ಬೆಂಗಳೂರಿನಲ್ಲಿ ಒಂದು ಬಹಳ ದೊಡ್ಡ ಹೋರಾಟವನ್ನು ಮಾಡುತ್ತಾ ಇದ್ದಾರೆ. ಮಾನ್ಯ ಸಚಿವರ ಗಮನದಲ್ಲಿದೆ ಎಂದು ಅಂದುಕೊಂಡಿದ್ದಾರೆ. ಜುಲೈ 1ನೇ ತಾರೀಖು ಅವರೆಲ್ಲರೂ ಕಪ್ಪು ಪಟ್ಟಿ ಧರಿಸಿ ತಮ್ಮ ತಮ್ಮ ಕಚೇರಿಯಲ್ಲಿ ಕೆಲಸ ಮಾಡಿದರು. ಅದು ಮೊದಲನೇ ಹಂತದ ಹೋರಾಟ. ಅದಕ್ಕೂ ಮುಂಚೆ ಮನವಿಗಳನ್ನು ಕೊಟ್ಟಿದ್ದಾರೆ. ಹೊಸ ಸರ್ಕಾರ ಬಂದ ನಂತರ 1ನೇ ತಾರೀಖು ಹೋರಾಟ ಮಾಡಿದರು. ಅದರ ನಂತರ ಜುಲೈ 15 ರಾಜ್ಯಾದ್ಯಂತ ಅವರು ಸಾಮೂಹಿಕ ರಜೆ ಹಾಕಿ ಸರ್ಕಾರದ ಗಮನ ಸೆಳೆಯುವ ಪ್ರಯತ್ನ ಮಾಡಿದರು. ಇವತ್ತು ಬೆಂಗಳೂರಿನಲ್ಲಿ ಒಂದು ಹೋರಾಟ ಮಾಡುತ್ತಾ ಇದ್ದಾರೆ. ಅವರ ಮುಖ್ಯವಾದ ಎರಡು-ಮೂರು ಬೇಡಿಕೆಯಗಳನ್ನು ನಾನು ಉಲ್ಲೇಖಿಸುತ್ತೇನೆ. ಅವರದ್ದು ಸುಮಾರು ಎಂಟು ಬೇಡಿಕೆಪಟ್ಟಿ ಇದೆ. ಮುಖ್ಯವಾಗಿ ಅವರದು ಸಿ ಅಂಡ್ ಆರ್ ರೂಲೇ ಆಗಿಲ್ಲ ಅಧ್ಯಕ್ಷರೇ. ಅವರ ನೇಮಕಾತಿಗಳು ಹೇಗಾಗಬೇಕು ಎಂಬುದು ಗೊತ್ತಿಲ್ಲ. ಅವರನ್ನು ಎಲ್ಲೆಲ್ಲಿಂದಲೋ ಅಭಿವೃದ್ಧಿ ಇಲಾಖೆಗಳಿಂದ ತೆಗೆದುಕೊಂಡಿದ್ದೇವೆ. ಅವರಿಗೆ ಯಾವ ರೀತಿ ಬಡ್ತಿ ಸಿಗಬೇಕು. ಯಾವ ರೀತಿಯಾದ

ಪಗಾರಗಳು ಅವರಿಗೆ ಸಿಗಬೇಕು. ಈ ರೀತಿ ಭಯಂಕರ ಗೊಂದಲ ಇದೆ. ಗ್ರೇಡ್ ಒಂದು, ಗ್ರೇಡ್ ಎರಡು ಎಂದು ಗ್ರಾಮಪಂಚಾಯ್ತಿಗಳಲ್ಲಿ ಸೆಕ್ರೆಟರಿಗಳ ಹುದ್ದೆಯೂ ಬೇರೆ ಇದೆ. ಹೀಗಾಗಿ ಅವರದು ಸಿ ಅಂಡ್ ಆರ್ ರೂಲನ್ನು ಸರ್ಕಾರ ಯಾವಾಗ ಮಾಡುತ್ತದೆ ಎಂಬುದನ್ನು ಸ್ಪಷ್ಟಪಡಿಸಬೇಕು. ಅದಿಲ್ಲಾವೆಂದರೆ ಗ್ರಾಮಪಂಚಾಯ್ತಿಗಳಲ್ಲಿರುವ ಕಾರ್ಯದರ್ಶಿಗಳಿರಬಹುದು ಸಿಬ್ಬಂದಿ ವರ್ಗ ಇರಬಹುದು. ಬಹಳ ಗೊಂದಲದಲ್ಲಿದೆ. ಹಾಗಾಗಿ ಸಿ ಅಂಡ್ ಆರ್ ರೂಲ್ ಆಗಬೇಕು. ಇದು ಅವರ ಮೊದಲ ಬೇಡಿಕೆ. ಅದರ ಜೊತೆಯಲ್ಲಿ ಈಗ ಗ್ರಾಮ ಪಂಚಾಯ್ತಿಗಳ ಮೂಲಕವೇ ಅವರಿಗೆ ಪಗಾರ ಕೊಡಬೇಕು ಎಂಬ ಸುತ್ತೋಲೆ ಸರ್ಕಾರದಿಂದ ಹೋಗಿದೆ. ಇದರಿಂದಾಗಿ ಅವರು ಬಹಳ ಆತಂಕಕ್ಕೊಳಪಟ್ಟಿದ್ದಾರೆ. ಯಾಕೆಂದರೆ ಗ್ರಾಮಪಂಚಾಯ್ತಿ ಇವತ್ತು ಬೀಗ ಹಾಕುವ ಸ್ಥಿತಿಯಲ್ಲಿರುವುದು ನಮ್ಮೆಲ್ಲರ ಗಮನದಲ್ಲಿದೆ. ಹಣವೇ ಇಲ್ಲದ ಸ್ಥಿತಿ, ನಾಳೆ ನಮಗೆ ಪಗಾರ ಬರದೇ ಹೋಗಬಹುದು ಎಂಬ ಭಯ, ಹಾಗೆ ನೋಡಿದರೆ ಪಂಚಾಯ್ತಿಯ ಸೆಕ್ರೆಟರಿಯಿಂದ ಹಿಡಿದು ಸಿಬ್ಬಂದಿಯನ್ನು ಸಂವಿಧಾನದ ತಿದ್ದುಪಡಿಯಲ್ಲಿರುವಂತೆ ನೋಡಿದರೆ ಅವರ ನೇಮಕಾತಿಯನ್ನು ಮಾಡಿಕೊಳ್ಳುವುದಕ್ಕೆ ಅಧಿಕಾರವೂ ಪಂಚಾಯ್ತಿಗಳಿಗಿದೆ. ಇವತ್ತು ಪಗಾರವನ್ನು ಪಂಚಾಯ್ತಿಯವರೇ ಕೊಡಬೇಕು ಎಂದು ಹೇಳುತ್ತಿರುವುದರಿಂದ ಗೊಂದಲ ನಿರ್ಮಾಣವಾಗಿದೆ. ಹಾಗಾಗಿ ಅವರಿಗೆ ಎಲ್ಲಾದರೂ ಒಂದು ಕಡೆ ಸರಕಾರ ಪಗಾರ ಕೊಡುವ ಬಗ್ಗೆ ಗ್ಯಾರಂಟಿ ಕೊಡಲು ಮುಂದಾಗಬೇಕು. ಅವರು ಈ ಸುತ್ತೋಲೆಯನ್ನು ಹಿಂತೆದುಕೊಳ್ಳಬೇಕು ಎಂದು ಹೇಳುತ್ತಾ ಇದ್ದಾರೆ. ನಾನು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದಿಷ್ಟೆ ಅವರ ಹೋರಾಟದ ಹತ್ತಿರ ಮಾನ್ಯ ಸಚಿವರು ಹೋಗಿ ಅವರ ಬೇಡಿಕೆಗಳೇನಿವೆ ಅವುಗಳನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಲಿ, ಅವರ ವಿಚಾರ ಏನು ಎನ್ನುವುದನ್ನು ತಿಳಿದುಕೊಂಡು ಅವರಿಗೆ ಸ್ಪಂದಿಸಲಿ. ಇದಿಲ್ಲಾಂದ್ರೆ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಗ್ರಾಮಪಂಚಾಯ್ತಿ ವ್ಯವಸ್ಥೆ ಏನು ಕೆಲಸ ಮಾಡುತ್ತಿದೆ ಇದಕ್ಕೆ ಬಹಳ ತೊಂದರೆಯಾಗುತ್ತದೆ. ಹಾಗಾಗಿ ಹೋರಾಟಗಾರರ ಬಳಿಗೆ ಹೋಗಿ ಸಚಿವರು ಮಾತನಾಡಿಸಬೇಕು. ಅವರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕು.

† **ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು)** : ಅಧ್ಯಕ್ಷರೇ, ನಮ್ಮ ಪಂಚಾಯ್ತಿ ನೌಕರರಿಗೆ ಅವರಿಗೆ ಭದ್ರತೆ ಇಲ್ಲ. ಅವರ ಆತಂಕ ಏನು ? ಇನ್ನು ಮುಂದೆ ಅವರು ಗ್ರಾಮಪಂಚಾಯಿತಿಗಳಿಂದ ವೇತನ ಪಡೆಯಬೇಕು ಅಂದರೆ ನಮಗೆ ಕಷ್ಟವಾಗುತ್ತದೆ ನಮಗೆ ಸಮಯಕ್ಕೆ ಸರಿಯಾಗಿ ಸಂಬಳ ಸಿಗುವುದಿಲ್ಲ ತೊಂದರೆಗೊಳಗಾಗುತ್ತೇವೆ ಎಂದು ಅಡ್ವಾನ್ಸಾಗಿ ಗೊಂದಲದಲ್ಲಿ ಸಿಕ್ಕಿ ನರಳುತ್ತಿದ್ದಾರೆ. ಮತ್ತೆ ಸಿ ಅಂಡ್ ಆರ್ ರೂಲ್ಸ್ ರಚನೆ ಮಾಡಿ ಅವರಿಗೆ ರಕ್ಷಣೆ ಕೊಡಬೇಕಾಗಿರುವುದು ನಮ್ಮ ಕರ್ತವ್ಯ ಇದೆ. ಯಾಕೆಂದರೆ ಅವರನ್ನು ಟೆಂಪೊರರಿಯಾಗಿಟ್ಟುಕೊಂಡು ನಾಲ್ಕು ದಿವಸ ಇಟ್ಟುಕೊಂಡು ಕಳುಹಿಸಿಕೊಡುತ್ತಾ ಇಲ್ಲ. ಬಹಳ ಮುಖ್ಯವಾದ ಸಂಗತಿ ಎಂದರೆ ನಾವು ಗಾಮಪಂಚಾಯಿತಿಗಳಿಗೆ ಕೊಡಬೇಕಾದ ಅನುದಾನ

ಮೂರ್ನಾಲ್ಕು ವರ್ಷದಿಂದ ಕೊಡದೇ ಸುಮಾರು 250 ಕೋಟಿ ರೂಪಾಯಿ ನಾವು ಬಾಕಿ ಉಳಿಸಿಕೊಂಡು ಇದ್ದೇವೆ. ಇವತ್ತು ಅಂಗನವಾಡಿ ಕಾರ್ಯಕರ್ತರೂ ಹೋರಾಟ ಪ್ರಾರಂಭ ಮಾಡಿದ್ದಾರೆ. ಒಂದು ಸಾರಿ ಗ್ರಾಮಪಂಚಾಯ್ತಿಯಲ್ಲಿ ನಮಗೆ ವೇತನ ಗೌರವಧನ ಕೊಡುವುದನ್ನು ಅಳವಡಿಸಿದರೆ ಅವರು ಯಾವ್ಯಾವುದಕ್ಕೋ ಉಪಯೋಗ ಮಾಡಿಕೊಳ್ಳುತ್ತಾರೆ ನಾಳೆ ನಮಗೆ ರಕ್ಷಣೆ ಇಲ್ಲ ಅನ್ನುವ ಭಯ ಇವತ್ತು ಅಂಗನವಾಡಿ ಕಾರ್ಯಕರ್ತರಿಗೂ ಕಾಡುತ್ತಿದೆ ಮತ್ತೆ ಪಂಚಾಯ್ತಿ ನೌಕರರಿಗೂ ಕಾಡುತ್ತಾ ಇದೆ. ಇಂತಹ ಸಂದರ್ಭದಲ್ಲಿ ಇದರ ಬಗ್ಗೆ ಒಂದು ವ್ಯಾಪಕವಾದ ಚರ್ಚೆಯಾಗಿ ಇದಕ್ಕೊಂದು ಪರಿಹಾರ ಹುಡುಕುವ ಪ್ರಾಮಾಣಿಕ ಪ್ರಯತ್ನ ಮಾಡದೇ ಸರ್ಕಾರಿ ನೌಕರರು ಬೀದಿಗಿಳಿದು ಹೋರಾಟ ಮಾಡುವ ಪರಿಸ್ಥಿತಿ ತಂದೇನೇ ಇದಕ್ಕೆ ಪರಿಹಾರ ಹುಡುಕಬೇಕು. ಅವರ ಪ್ರಮುಖರನ್ನು ಕರೆಸಿ ಅವರ ಜೊತೆ ಮಾತುಕತೆಯಾಗಿ ಈ ಸಮಸ್ಯೆಯನ್ನು ಬಗೆಹರಿಸಬೇಕು. ಒಂದು ಸಾರಿ ನಾವು ವೇತನ ಕೊಡುತ್ತೇವೆ ಎಂದು ಡೆಫಿಸಿಟ್ ಆದ ಮೇಲೆ ಗ್ರಾಮಪಂಚಾಯ್ತಿಗಳಿಗೆ ಯಾಕೆ ಅವರನ್ನು ತಳ್ಳುತ್ತೀರಾ ಗ್ರಾಮಪಂಚಾಯ್ತಿಯಿಂದ ಸಂಬಳ ಕೊಡುವಂತಹ ಈಗಿನ ಪದ್ಧತಿ ಏನಿದೆ ಅದನ್ನು ಮುಂದುವರೆಸುವುದಕ್ಕೆ ಕಷ್ಟ ಏನಿದೆ ? ದಯಮಾಡಿ ಅವರನ್ನು ಕರೆದು ಮಾತುಕತೆಯಾಡಿ ಅವರ ಸಮಸ್ಯೆಗೆ ಪರಿಹಾರ ಹುಡುಕಬೇಕು ಎಂದು ಒತ್ತಾಯ ಮಾಡುತ್ತಾ ಇದ್ದೇನೆ.

ಶ್ರೀ ಡಿ.ಆರ್. ಪಾಟೀಲ್(ಗದಗ) : ಇದರಲ್ಲಿ ನಮ್ಮ ಅಭಿಪ್ರಾಯ ಬೇರೆ ಇದೆ. ಇದನ್ನು ತಾವು ದಯಮಾಡಿ ಶೂನ್ಯವೇಳೆಯಲ್ಲಿ ತೆಗೆದುಕೊಳ್ಳುವ ಬದಲಿ ಅರ್ಧ ಗಂಟೆ ಚರ್ಚೆಗೆ ಕೊಟ್ಟರೆ ಅವರು ಅವರ ಅಭಿಪ್ರಾಯ ಮಂಡಿಸಲಿ ನಾವು ನಮ್ಮ ಅಭಿಪ್ರಾಯ ಮಂಡಿಸುತ್ತೇವೆ. ಅವರು ನೌಕರದಾರರ ಪರವಾಗಿ, ನಾವು ಜನರ ಪರವಾಗಿ ಈ ವ್ಯವಸ್ಥೆ ಇರುವುದು ಯಾರ ಪರವಾಗಿ? ಇದನ್ನು ಮರೆತೆಬಿಡುತ್ತೇವೆ ನಾವು, ಯಾರೋ ಪ್ರತಿನಿಧಿಗಳು ಬಂದು ನಮ್ಮನ್ನು ಭೇಟಿಯಾದ ಕೂಡಲೇ ಅವರ ವಕೀಲರಾಗಿ ಕೆಲಸಮಾಡಲು ಹತ್ತಿಬಿಡುತ್ತೇವೆ. ನಮ್ಮನ್ನು ಚುನಾಯಿತರನ್ನಾಗಿ ಮಾಡಿ ಕಳಿಸಿದ ಜನರ ಬಗ್ಗೆ ಕಾಳಜೀನೇ ಮಾಡುವುದಿಲ್ಲ. ದಯವಿಟ್ಟು ತಾವು ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಈ ವಿಷಯವಾಗಿ ಸಹಿ ಮಾಡಿಕೊಟ್ಟವರು ನಾವು. ನಾವು ಯಾರ ಪರ ಅವರು ಯಾರ ಪರ ಈ ವಿಷಯಗಳನ್ನೆಲ್ಲಾ ಚರ್ಚೆ ಮಾಡಲಿಕ್ಕೆ ಹೋದರೆ ಪಂಚಾಯ್ತಿಯಲ್ಲಿ ಕೆಲಸ ಮಾಡುವವರೂ ಮನುಷ್ಯರೇ ಇದ್ದಾರೆ. ಅವರ ಹಿತವನ್ನೂ ಕಾಪಾಡಬೇಕು. ಜನರ ಹಿತ ಕಾಪಾಡಬೇಕು, ನಾನು ಈ ಉಳಿದೆಲ್ಲಾ ವಿಷಯಗಳಿಗೆ ಹೋಗುತ್ತಿಲ್ಲ. ಇವತ್ತು ಅವರು ಹೋರಾಟ ಮಾಡುತ್ತಿದ್ದಾರೆ. ಮಾನ್ಯ ಸಚಿವರು ಹೋಗಿ ಅಥವಾ ಅವರನ್ನು ಕರೆಸಿ ಮಾತನಾಡಿ ಅವರ ಬೇಡಿಕೆಗಳೇನು ಅಂತ ಸಹಾನುಭೂತಿಯಿಂದ ಕೇಳಬೇಕು. ಅವರು ಈಗಾಗಲೇ ಅನೇಕ ಹೋರಾಟ ಮಾಡಿದ್ದಾರೆ, ಪಂಚಾಯ್ತಿ ನೌಕರರೂ ಮನುಷ್ಯರಾಗಿರುವುದರಿಂದ ಅವರ ಬೇಡಿಕೆಗಳನ್ನು ಸಹಾನುಭೂತಿಯಿಂದ ಕೇಳುವಲ್ಲಿ ನಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ಮತದಾರರು ಮಾತ್ರ ಮನುಷ್ಯಲ್ಲ ನೋಡಿ.

ಶ್ರೀ ಜೆ. ಶ್ರೀರಾಮರೆಡ್ಡಿ : ವೋಟರ್ಸ್‌ಗಳು ಮನುಷ್ಯರೇ. ನೌಕರರೂ ಮನುಷ್ಯರೇ.

ಶ್ರೀ ಎಸ್. ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಈ ಬಿಲ್ ತಿದ್ದುಪಡಿ ಮಾಡುವ ಮುನ್ನ ಇದಕ್ಕೊಂದು ಜಂಟಿ ಸದನ ಸಮಿತಿ ಮಾಡಿದ್ದರು. ಅದರಲ್ಲಿ ಎಲ್ಲಾ ಪಕ್ಷದವರೂ ಇದ್ದರು, ಎಲ್ಲರೂ ಸರ್ವಾನುಮತದಿಂದ ಒಪ್ಪಿಕೊಂಡು ಆ ತಿದ್ದುಪಡಿ ತಂದಿದ್ದಾರೆ. ಇಲ್ಲದೇ ಹೋದರೆ ಪಂಚಾಯ್ತಿ ಸೆಕ್ರೆಟರಿಗಳ ಮೇಲೆ ಆ ಚೇರ್ಮನರ ಕಂಟ್ರೋಲೇ ಇರುತ್ತಿರಲಿಲ್ಲ. ಈಗ ಆ ಪಗಾರ ತಪ್ಪಿಸುವ ಹಾಗಾಗಿದೆ ಇವರಿಗೆ. ಆ ಪಗಾರವನ್ನು ಸರ್ಕಾರವೇ ಕೊಡುತ್ತದೆ. ಪಂಚಾಯ್ತಿ ಹಣದಲ್ಲಿ ಇಲ್ಲ ಇದು. ಮಾನ್ಯ ಅರಗ ಜ್ಞಾನೇಂದ್ರ ಸಹ ಆ ಸಮಿತಿಯಲ್ಲಿದ್ದರು. ಎಲ್ಲರೂ ಒಪ್ಪಿಕೊಂಡಿದ್ದರೂ. ಆದ್ದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಅದು ಒಳ್ಳೆಯ ಬಿಲ್.

ಶ್ರೀ ಅರಗ ಜ್ಞಾನೇಂದ್ರ : ನಾನು ಪಾಟೀಲರೆಲ್ಲಾ, ಆ ಜಂಟಿ ಸದನ ಸಮಿತಿಯಲ್ಲಿದ್ದು ಕೆಲಸ ಮಾಡಿದ್ದೇವೆ, ಇವತ್ತು ಹತ್ತಾರು ಸಾವಿರ ಜನ ಹಳ್ಳಿಯಿಂದ ಬಂದಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಬಹಳ ಮುಖ್ಯವಾದ ವಿಚಾರ ಎಂದು ಹೇಳಿ ಅರ್ಧ ಗಂಟೆ ಚರ್ಚೆಗೆ ತನ್ನಿ ಎಂದು ಅಂದಿರಲ್ಲಾ ಅದಕ್ಕೆ ಒಪ್ಪಿಕೊಳ್ಳೋಣ. ಶೂನ್ಯವೇಳೆಯಲ್ಲಿ ಹತ್ತೂ ಮಂದಿ ಅಭಿಪ್ರಾಯ ವ್ಯಕ್ತಮಾಡುವುದಾದರೆ ನಿಯಮಾವಳಿ ಪ್ರಕಾರ ಹೇಗೆ ಉತ್ತರ ಕೊಡಬೇಕಾಗುತ್ತದೆ? ತಾವು ಹಿರಿಯರು, ತಾವು ಹೇಳಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಪಾಟೀಲರು ನನ್ನ ಹೆಸರು ಹೇಳಿದ್ದಾರೆ ಅದಕ್ಕಾಗಿ ಹೇಳುತ್ತಾ ಇದ್ದೇನೆ, ಇಲ್ಲದಿದ್ದರೆ ನನಗೆ ಇದರಲ್ಲಿ ಪ್ರವೇಶ ಮಾಡಬೇಕು ಅನ್ನುವುದು ಏನಿಲ್ಲ, ಮಾನ್ಯ ವಿಶ್ವೇಶ್ವರ ಹೆಗಡೆ ಹಾಗೂ ವಿರೋಧ ಪಕ್ಷದ ನಾಯಕರೂ ಹೇಳಿದ್ದಾರೆ. ನಾವೂ ಕೂಡ ಸಲಹಾ ಸಮಿತಿಯಲ್ಲಿದ್ದವರೇ. ನಾವು ಅವತ್ತು ಹೇಳಿದ್ದೇವೆ. ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಪಂಚಾಯ್ತಿ ಕಂಟ್ರೋಲ್‌ನಲ್ಲಿ ಅವರು ಇರಬೇಕು ಎಂದು ಹೇಳಿದ್ದೇನೆ. ಆತಂಕದ ವಿಚಾರ ಏನೆಂದರೆ ನೀವು ಪಂಚಾಯ್ತಿಯ ಹಣಕಾಸಿನ ದುಸ್ಥಿತಿ ಎಲ್ಲಿಗೆ ತಂದಿದ್ದೀರಿ? ಇವತ್ತೂ ಯಾರಿಗೂ ಸಂಬಳ ಇಲ್ಲ ಅಭಿವೃದ್ಧಿ ಕೆಲಸ ಇಲ್ಲ ಏನೂ ಆಗದೇ ಇರುವ ಸ್ಥಿತಿಗೆ ಅದನ್ನು ತಂದಾಗ ಅವರಿಗೆ ಆತಂಕದ ಸ್ಥಿತಿ ಬಂದಿದೆ. ಅಭಿವೃದ್ಧಿ ಕೆಲಸ ಹೀಗಾದರೆ, ನಮ್ಮ ಅನ್ನದ ಗತಿಯೇನು ಎಂದು ಇವತ್ತು ಆ ಮುಖ್ಯಸ್ಥರ ಜೊತೆ ಸರ್ಕಾರ ಕೂತು ಚರ್ಚೆ ಮಾಡಲಿ, ಅವರಿಗೆ ಧೈರ್ಯ ಕೊಡಲಿ, ಅದರಲ್ಲೇನೂ ತಪ್ಪಿಲ್ಲವಲ್ಲಾ.

† **ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)**: ಅಧ್ಯಕ್ಷರೇ, ಬಹಳ ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಮಾನ್ಯ ಎಸ್ ಎಸ್ ಪಾಟೀಲರು ಹಾಗೂ ಮಾನ್ಯ ಡಿ.ಆರ್. ಪಾಟೀಲರು ಹೇಳಿದ್ದು ಒಂದು ವಿಚಾರ. ಮಾನ್ಯ ವಿಶ್ವೇಶ್ವರ ಹೆಗಡೆಯವರು ಗೊಂದಲಗೊಳಗಾಗಿದೆ

ಎಂಬುದೇನಿದೆ ಗೊಂದಲ ನಮ್ಮ ಮನಸಿನಲ್ಲಿದೆ. ನಾವು ಒಂದು ಕಡೆಗೆ ವಿಕೇಂದ್ರೀಕರಣದ ವ್ಯವಸ್ಥೆ ಒಪ್ಪಿಕೊಂಡಿದ್ದೇವೆ. ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸುತ್ತೇವೆ. ಆದರೆ ವಿಕೇಂದ್ರೀಕರಣಕ್ಕೆ ವಿರುದ್ಧವಾಗಿರುವಂಥ ಸಂಘಟಿತವಾಗಿರುವಂಥ ಗುಂಪುಗಳಿರುತ್ತವೆ. ಅಂಗನವಾಡಿ ಕಾರ್ಯಕರ್ತರಾಗಬಹುದು, ಎಎನ್ಎಂ ಆಗಿರುವವರಿಬಹುದು. ಕಾರ್ಯದರ್ಶಿಗಳಾಗಿರಬಹುದು. ಆಯಾ ಸ್ವಾಯತ್ತಸಂಸ್ಥೆಗಳಿಂದ ಹಣ ಪಾವತಿಯಾಗುತ್ತದೆ ನಿಮ್ಮ ಸಂಬಳಕ್ಕೆ ಅಲ್ಲಿಗೆ ಹೋಗಬೇಕಾಗುತ್ತದೆ ಎಂದ ತಕ್ಷಣವೇ ವಿಕೇಂದ್ರೀಕರಣ ವ್ಯವಸ್ಥೆಯಡಿ ಪಂಚಾಯ್ತಿಗಳು ಬಲಯುತವಾಗಬಾರದು ಯಾಕೆಂದರೆ ನೇರವಾಗಿ ಅವರು ಅವರಿಗೆ ಉತ್ತರ ಕೊಡಬೇಕಾಗುತ್ತದೆ. ಅವರು ಸರಿಯಾಗಿ ಕೆಲಸ ಮಾಡಲಿಲ್ಲ ಅಂದರೆ ಅವರ ಮೇಲೆ ಅಧಿಕಾರ ಇಟ್ಟುಕೊಳ್ಳುವ ಅಧಿಕಾರ ಇರುತ್ತದೆ. ಆ ಕಾರಣಕ್ಕಾಗಿ ಸಂಘಟಿತವಾಗಿರುವ ಗುಂಪುಗಳು ಬಂದಾಗ ನಾವು ಅವರಿಗೆ ಹೇಳಬೇಕಾಗಿರುವುದು ವಿಕೇಂದ್ರೀಕರಣಕ್ಕೆ ನಾವು ಬದ್ಧ ಆಗಿರುವುದರಿಂದ ಯಾರು ನಿಮ್ಮಿಂದ ಕೆಲಸವನ್ನು ತೆಗೆದುಕೊಳ್ಳುವರೋ ಅವರಿಂದಲೇ ನಿಮ್ಮ ಸಂಬಳ ಪಡೆದುಕೊಳ್ಳಿ ಎಂಬ ಮಾತು ಹೇಳಿದರೆ ಗೊಂದಲ ಉದ್ಭವವಾಗುವುದಿಲ್ಲ. ಎರಡನೆಯ ಪ್ರಶ್ನೆ ತಾವು ಎತ್ತಿರುವುದು ಸಿ ಅಂಡ್ ರೂಲ್ಸ್ ಮಾಡಿಲ್ಲ ಅಂತ, ಈಗ ನನಗೆ ಗೊತ್ತಿದ್ದಂತೆ ಗ್ರಾಮೀಣಾಭಿವೃದ್ಧಿ ಇಲಾಖೆಯವರು ಎರಡು ಬಾರಿ ಸಚಿವಸಂಪುಟ ಸಭೆಗೆ ಅದನ್ನು ಕಳಿಸಿಕೊಟ್ಟಿದ್ದರಂತೆ, ಇಲ್ಲಿ ನನಗೆ ಬಂದಿರುವ ಮಾಹಿತಿ ಪ್ರಕಾರ ಬಹುಶಃ ಮುಂದಿನ ಸಚಿವಸ್ಸಂಪುಟ ಸಭೆಯಲ್ಲಿ ಸಿ ಅಂಡ್ ಆರ್ ರೂಲ್ಸ್ ವಿಚಾರದಲ್ಲಿ ಕೆಲವೊಂದು ಸೃಷ್ಟೀಕರಣ ಕೇಳಿರುವುದು ಇದೆ, ಬಹುತೇಕ ಅದರ ಬಗ್ಗೆ ಇನ್ನು ಸ್ವಲ್ಪೇ ದಿನದಲ್ಲಿ ಸರ್ಕಾರ ಕ್ರಮ ಕೈಗೊಳ್ಳಬಹುದು. ಮೂರನೆಯದು ಸನ್ಮಾನ್ಯ ಅಧ್ಯಕ್ಷರೇ, ಯಾರು ಎಸ್ಎಸ್ಎಲ್ಸಿವರೆಗೆ ವಿದ್ಯಾರ್ಹತೆ ಪಡೆದಿರುತ್ತಾರೆ ಅವರು ಬಿಲ್ ಕಲೆಕ್ಟರಾಗಿದ್ದಾರೆ ಅಥವಾ ಬೇರೆ ಬೇರೆ ಉದ್ಯೋಗ ಮಾಡುತ್ತಾ ಇದ್ದರೆ ಅವರಿಗೆ ನಾವು ಮುಂಬಡ್ತಿಯನ್ನು ಕೊಡಬೇಕು ಅವರನ್ನು ಗ್ರೇಡ್-II ಪಂಚಾಯ್ತಿಗಳಿಗೆ ಹಾಕಬೇಕು. 6 ಸಾವಿರಕ್ಕಿಂತ ಜನಸಂಖ್ಯೆ ಕಡಿಮೆ ಇರುವಂಥದ್ದು ಗ್ರೇಡ್-II ಕಾರ್ಯದರ್ಶಿಗಳು ಬರುತ್ತಾರೆ. 6 ಸಾವಿರಕ್ಕಿಂತ ಹೆಚ್ಚಿದ್ದಾರೆ ಗ್ರೇಡ್-I ಕಾರ್ಯದರ್ಶಿಗಳಾಗಿರುತ್ತಾರೆ. ಅದಕ್ಕೆ ಪದವೀಧರರನ್ನು ಹಾಕತಕ್ಕಂಥದ್ದು ಇದೆ. ಅದರಲ್ಲಿ ಸ್ಟೈಪೆಂಡರಿ ಗ್ರಾಜುಯೇಟ್ಸ್ಗಳೂ ಕೂಡ ಬಹಳ ಜನ ಅದಕ್ಕೆ ನೇಮಕಾತಿಯಾಗಿರತಕ್ಕವರೂ ಕೂಡ ಇರುತ್ತಾರೆ. ಈ ಕಾರ್ಯದರ್ಶಿಗಳ ಸಂಬಳವನ್ನು ಸರ್ಕಾರ ನೇರವಾಗಿ ಕೊಡುತ್ತದೆ. ಉಳಿದರತಕ್ಕಂಥದ್ದನ್ನು ಗ್ರಾಮಪಂಚಾಯಿತಿಯವರು ಕೊಡಬೇಕಾಗುತ್ತದೆ. ಗ್ರಾಮಪಂಚಾಯಿತಿಗಳವರು ಅನೇಕ ಕಾರಣಗಳಿಗಾಗಿ ಅದನ್ನು ಭರಿಸಿರಬಹುದು ಎನ್ನುವಂಥ ತಮ್ಮ ಆಪಾದನೆಯನ್ನು ನಾನು ಬಹುಮಟ್ಟಿಗೆ ನಿಜ ಇರಬಹುದೆನೋ ಒಪ್ಪಿಕೊಂಡೆ. ಆದರೆ ಇಲ್ಲಿರುವ ಗೊಂದಲ ಯಾವುದೆಂದರೆ ಸ್ಥಿತ್ಯಂತರದ ಅವಧಿಯಲ್ಲಿ ನಾವು ತೋರಿಸುವಂಥ ರಾಜಕೀಯ ಇಚ್ಛಾಶಕ್ತಿ ಮತ್ತು ಮನೋಭೂಮಿಕೆ. ಚರ್ಚಿಲ್ ಭಾಷೆಯನ್ನು ನಾವು ಬಳಸಬಾರದು. ಚರ್ಚಿಲ್

ಈ ಮಾತುಗಳನ್ನು ಹೇಳುತ್ತಾರೆ. ಈ ದೇಶದಲ್ಲಿ ಸಾವಿರಾರು ಜಾತಿಗಳಿವೆ. ನೂರಾರು ಭಾಷೆಗಳಿವೆ. ಆ ಆಚಾರವಿಚಾರಗಳಲ್ಲಿ ವ್ಯತ್ಯಾಸ ಇದೆ. ತಮ್ಮನ್ನು ತಾವು ಆಳಿಕೊಳ್ಳುವುದಕ್ಕೆ ಅನರ್ಹರಾಗಿರತಕ್ಕಂಥವರು, ಆದ್ದರಿಂದ ಸ್ವತಂತ್ರ್ಯ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದರು. ಆಗ ಗಾಂಧೀಜಿಯವರು ಹೇಳಿದರು. ``I never wanted a good Government, I want our Government" ಎಂದು ಹೇಳಿದರು. ನಮ್ಮ ಸರ್ಕಾರ ಬೇಕು. ನೀವು ಒಳ್ಳೆಯ ಸರ್ಕಾರವನ್ನು ಆರು ಸಾವಿರ ಕಿಲೋಮೀಟರ್ ಆಚೆಗೆ ಕೊಡಬೇಕಾದುದು ಇಲ್ಲ ಆದ್ದರಿಂದ ಗ್ರಾಮಪಂಚಾಯಿತಿಗಳಲ್ಲಿ ತಪ್ಪುಗಳಾಗಿದ್ದರೆ, they have a right to commit a mistake. ತಪ್ಪು ಮಾಡುವುದಕ್ಕೆ ಅವರಿಗೆ ಅರ್ಹತೆ ಇದೆ. ನಾವು ಹೇಗೆ ಶಾಸಕರುಗಳು ತಪ್ಪು ಮಾಡುತ್ತೇವೆ, ಹಾಗೆಯೇ ಅವರಿಗೂ ಅಧಿಕಾರ ಇದೆ. ಈ ಒಂದು ವಿಚಾರಗಳ ಬಗ್ಗೆ ನನಗೆ ಗೊಂದಲ ಇಲ್ಲದಿದ್ದರೆ ನಾವು ಇಂಥ ವಿಚಾರಗಳಲ್ಲಿ ಅದನ್ನು ಎದುರಿಸುವುದಕ್ಕೆ ಸಾಧ್ಯತೆಯಾಗುತ್ತದೆ. ಆದರೆ ತಾವು ಹೇಳಿದಂತೆ ಜಿಲ್ಲೆ ಒಂದು ಘಟಕವಾಗಿರುವುದರಿಂದ ಜಿಲ್ಲಾ ಘಟಕದಲ್ಲಿ ಅವರಿಗೆ ಹೇಗೆ ತೊಂದರೆಯಾಗುತ್ತದೆ ಸನ್ಮಾನ್ಯ ಸಭಾಧ್ಯಕ್ಷರೇ, ಬೇರೆ ಬೇರೆ ಇಲಾಖೆಯವರನ್ನೂ ಕೂಡ ಇದರಲ್ಲಿ ಪಾಲು ಕೊಡಬೇಕೆನ್ನುವ ಆಜ್ಞೆ ಇದೆ. ಈಗ ಕಂದಾಯ ಇಲಾಖೆಯಿಂದ ಬರತಕ್ಕಂಥವರು, ಮೊದಲಾದವರು ಇರಬಹುದು, ಈಗ ಒಂದು 50 ಹುದ್ದೆಗಳು ಖಾಲಿ ಇವೆ ಜಿಲ್ಲಾ ಘಟಕದಲ್ಲಿ ಅಂದಾಗ ಎಲ್ಲರೂ ಕೂಡ ಗ್ರಾಮೀಣಾಭಿವೃದ್ಧಿ ಇಲಾಖೆಯವರಾದರೆ ಅವರು ಎಲ್ಲರಿಗೂ ಕೂಡ ಕೊಡುವುದಕ್ಕಾಗುವುದಿಲ್ಲ. ಆಗ ಅವರೇನು ಮಾಡುತ್ತಾರೆಂದರೆ ಬೇರೆ ಬೇರೆ ಇಲಾಖೆಗಳಿಂದ ಅವರು ಪ್ರಸ್ತಾವಗಳನ್ನು ತರಿಸಿಕೊಂಡು ಅವರಿಗೆ ಮುಂಬಡ್ತಿಯನ್ನು ಕೊಡುತ್ತಾರೆ. ಇವತ್ತು ಕೂಡ ನನ್ನನ್ನು ಆ ನೌಕರದಾರರೆಲ್ಲಾ ಬಂದು ಕಂಡಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳ ಒಪ್ಪಿಗೆಯನ್ನು ಪಡೆದು ನಾನು ಹೋಗಿ ಅವರನ್ನು ಕಾಣುತ್ತೇನೆ. ಯಾರೇ ಹೋರಾಟ ಮಾಡತಕ್ಕ ಜನಗಳಲ್ಲಿ ಜೊತೆಗೆ ನಾವು ಸಂಪರ್ಕ ಇಟ್ಟುಕೊಳ್ಳತಕ್ಕದ್ದು ಈ ಸರ್ಕಾರದ ಬದ್ಧತೆ, ಅದರ ಬಗ್ಗೆಯೂ ನಾವು ಕೆಲಸವನ್ನು ಮಾಡುತ್ತೇವೆ. ಈಗ ತಾವು ಅರ್ಧ ಗಂಟೆ ಚರ್ಚೆಯಾಗಬೇಕು ಎಂದು ಹೇಳಿ ಆಥವಾ ತಾವು ಬೇರೆ ಸಮಯದಲ್ಲಿ ಕೊಡಿ. ಅದರ ಬಗ್ಗೆ ವ್ಯಾಪಕ ಚರ್ಚೆಯಾಗಲಿ, ಈಗ ಮಾತ್ರ ಈ ಸಂಬಳವನ್ನು ಕೊಡುವ ವಿಚಾರದಲ್ಲಿ ಗೊಂದಲಕ್ಕೆ ಒಳಗಾಗಬೇಕಾದ ಅಗತ್ಯವಿಲ್ಲ. ಎಂದು ನಾನು ಭಾವಿಸಿಕೊಂಡಿದ್ದೇನೆ.

ಅಧ್ಯಕ್ಷರು ; ಈಗ ಬಹಳ ಜನ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದೀರಿ. ವಿವರವಾಗಿ ಹೇಳಿದ್ದಾರೆ, ಅಗತ್ಯವಿದ್ದರೆ ಅದನ್ನು ಕನ್‌ವರ್ಟ್ ಮಾಡೋಣ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಇದು ಬೇರೆ. ಕರ್ನಾಟಕದಲ್ಲಿ ವನ ಸಂವರ್ಧನಾ ಟ್ರಸ್ಟ್ ಎಂದು ಕಳೆದ ವರ್ಷ.....

ಶ್ರೀ ಎಂ.ಪಿ. ಪ್ರಕಾಶ್ (ಕಂಪಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಇವತ್ತಿ 2-8-2004 ಕ್ಕೆ ಶೂನ್ಯವೇಳೆ ಸೂಚನಾ